ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ
ನ್ಯಾಯಾಲಯ ಮೂಡಬಿದಿರೆ

ಸಿಸಿ ನಂ.294/2018 , ಚಾಸಾ-7, ಫ್ರಾಸಾ -5

| | |
|---|---|
| ಹೆಸರು | ಸುರೇಶ್ ಆಚಾರ್ಯ |
| ತಂದೆಯ ಹೆಸರು | ವೆಂಕಟೇಶ್ ಆಚಾರ್ಯ |
| ವಯಸ್ಸು | 34 ವರ್ಷ |
| ಕೆಲಸ | ಖಾಸಗಿ |
| ವಾಸ | ಮೂಡಬಿದ್ರಿ |
| ಪ್ರಮಾಣೀಕರಿಸಿದ ದಿನಾಂಕ | 20-11-2023 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತು. ಪೋಲಿಸರು ನನ್ನು ಈ ಪ್ರಕರಣಕ್ಕೆ ಸಂಬಂಧಿಸಿಂದತೆ ಠಾಣೆಗೆ ಕರೆದದಿರುತ್ತಾರೆ. ನಂತರ ಪ್ರಕರಣದದಲ್ಲಿ ಆಭರಣವನ್ನು ತೂಕ ಮಾಡುವ ಸಲುವಾಗಿ ನನ್ನನ್ನು ಕೋರಿಕೊಂಡಿರುತ್ತಾರೆ. ಪೋಲಿಸ್ ಠಾಣೆಯಿಂದ ಆರೋಪಿ ಹಾಗೂ ಪೋಲೀಸರೊಂದಿಗೆ ಆರೋಪಿ ಮನೆಯಾದ ತೋಡಾರಿಗೆ ಹೋಗಿರುತ್ತೇನೆ. ಆಗ ಆರೋಪಿಯ ಮನೆಯ ಕೊಟ್ಟಿಗೆಯಲ್ಲಿ ಬಟ್ಟೆಯ ತುಂಡಿನಲ್ಲಿ ಗಂಟು ಕಟ್ಟಿದ್ಧ ಆಭರಣಗಳನ್ನು ಆರೋಪಿ ತೋರಿಸಿದ ಮೆರೆಗೆ ಅದನ್ನು ತೆಗೆದು ನೋಡಲಾಗಿ ಹಲವಾರು ಬಗೆಯ ಆಭರಣಗಳು ಚಿನ್ನದ ಚೈನ ಮತ್ತು ಬಳೆ, ಪೆಂಡೆಂಟ್, ಉಂಗುರ, ಜೋಮಾಲೆ, ಕಿವಿ ಬೆಂಡೋಲೆ, ಜುಮ್ಕಿ , ಇನ್ನೀತರ ಆಭರಣಗಳಿದ್ದವು. ಸದರಿ ಆಭರಣಗಳನ್ನು ನಾನು ತೂಕ ಮಾಡಿದ್ದು, ಅವುಗಳ ತೂಕವನ್ನು ನಾನು ಹೇಳಿದ ಪ್ರಕಾರ ಪೋಲಿಸರು ಬರೆದಿರುತ್ತಾರೆ.

ಆ ಸಮಯದಲ್ಲಿ ಪೋಲಿಸರು ಮತ್ತು ನನ್ನನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ. ನಂತರ ಕೈಕಂಬದಲ್ಲಿರುವ ಜುವೇಲರ್ಸ್ ಹೋಗಿ ಅಲ್ಲಿ ಸಹ ಚಿನ್ನವನ್ನು ಸ್ವಾಧೀನಪಡಿಸಿಕೊಳ್ಳುವ ಸಂಧರ್ಭದಲ್ಲಿ ಸ್ವತ್ತು ಸ್ವಾಧೀನ ಮಹಜರನ್ನು ಮಾಡಲಾಯಿತು. ಆಗಲೂ ಆಭರಣಗಳನ್ನು ತೂಕ ಮಾಡಿ ಕೊಟ್ಟಿರುತ್ತೇನೆ. ಸದರಿ ಸಮಯದಲ್ಲಿ ಸಣ್ಣ ಮಗುವಿನ ಚೈನ್, ನೆಕ್ ಲೇಸ್, ಇತರ ಬೇರೆ ಆಭರಣಗಳನ್ನು ಕೂಡ ಇದ್ದವು. ಅವುಗಳನ್ನು ತೂಕ ಮಾಡಿರುತ್ತೇನೆ. ಆ ಸಮಯದಲ್ಲಿ ಆರೋಪಿ ಹಾಗೂ ಅಂಗಡಿಯ ಮಾಲೀಖರಿದ್ದರು. ಸದರಿ ಆಭರಣಗಳನ್ನು ಪೋಲೀಸರು ಸ್ವಾಧೀನಪಡಿಸಿರುತ್ತಾರೆ. ಮಹಜರನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆವರೆಗೆ ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಸದರಿ ಮಹಜರನ್ನು ನಾನು ಈಗ ನೋಡುತ್ತಿದ್ದು, ಅದನ್ನು ನಿಪಿ-4 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಮಹಜರನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೆರೆಗೆ ಅದನ್ನು ನಿಪಿ-5 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

*(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ವಿಚಾರಣೆ ಮಾಡಲು ಮಾನ್ಯ ಸ ಸ ಅ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)*

ದಿನಾಂಕ 18-11-2017 ರಂದು ಆರೋಪಿ ಮನೆಯಲ್ಲಿ ಮಹಜರನ್ನು ಸಮಯ 12.30 ಗಂಟೆಯಿಂದ 1.30 ಗಂಟೆ ತನಕ ಮಾಡಿದರು ಎಂದರೆ ಸರಿ. ಆ ಸಮಯ ಚಾಸಾ-6

ಮತ್ತು ಚಾಸಾ-10 ರವರಿದ್ದರು ಎಂದರೆ ಗೊತ್ತಿಲ್ಲ. ದಿನಾಂಕ 18-11-2017 ರಂದು ಕೈಕಂಬದ ಸುಶೀಲ್ ಜ್ಯುವೇಲರ್ಸ್ ನಲ್ಲಿ ಚಾಸಾ-8 ಮತ್ತು 9 ರವರ ಸಮಕ್ಷಮ ಮಾಡಿರುತ್ತಾರೆ ಎಂದರೆ ಸರಿ. ಸದರಿ ಮಹಜರನ್ನು ಸಂಜೆ 20.30 ಯಿಂದ 21.30 ಗಂಟೆ ತನಕ ಮಾಡಿರುತ್ತಾರೆ ಎಂದರೆ ಸರಿ. ಆರೋಪಿ ಮನೆಗೆ ಹೋಗಿ ಸ್ವಾಧೀನಪಡಿಸಿದ ಜೊಮಾಲೆ-7.00 ಗ್ರಾಂ, ಬಂಗಾರದ ಮಗುವಿನ ಚೈನ್ ಸುಮಾರು 4.380 ಗ್ರಾಂ, ಬಂಗಾರದ ಹೆಂಗಸರ ಉಂಗುರ-2 ಇಂರ ತೂಕ 4.26 ಗ್ರಾಂ, ಬೇರೆ ಆಭರಣಗಳ ಜೊತೆಯಲ್ಲಿ ತೂಕ ಮಾಡಿ ಕೊಟ್ಟಿರುತ್ತೇನೆ ಎಂದರೆ ಸರಿ . ಕೆಕಂಬದ ಸುಶೀಲ್ ಜ್ಯುವೇಲರ್ಸ್ ನಲ್ಲಿ ಬಂಗಾರದ ಮುತ್ತಿನ ಸರ ಒಟ್ಟು ತೂಕ 19.360 ಗ್ರಾಂ ಹಾಗೂ ಬಂಗಾರದ ಕಾಸಿನ ಸರ ಒಟ್ಟು ತೂಕ 16.00 ಗ್ರಾಂ ಎಂದು ತೂಕ ಮಾಡಿ ಇತರ ಆಭರಣದ ಜೊತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ವಾಧೀನಪಡಿಸಿರುತ್ತಾರೆ ಎಂದರೆ ಸರಿ .

<u>ಪಾಟೀಸವಾಲುಃ ಶ್ರೀ ಎಸ್.ಎಸ್.ಡಿ. ವಕೀಲರಿಂದಃ-</u>

ತೋಡಾರು ಜಂಕ್ಷನ್ ನಲ್ಲಿ ಮೂಡಬಿದ್ರಿಯಿಂದ ಮಂಗಳೂರಿಗೆ ಎಡ ಬದಿಯಲ್ಲಿ ಹೋಗುವಾಗ ಆರೋಪಿಯ ಮನೆಗೆ ಹೋಗಿರುತ್ತೇವೆ. ಆರೋಪಿಯ ಮನೆಗೆ ಹೋದಾಗ ಪೋಲೀಸರ ಜೊತೆ ಕೊಟ್ಟಿಗೆಗೆ ಹೋಗಿರುತ್ತೇವೆ. ಪೋಲೀಸರು ಚಿನ್ನವನ್ನು ತೆಗೆಂದುಕೊಂಡು ಬಂದಾಗ ನಾವು ಅಂಗಳದಲ್ಲಿದ್ದೆವು. ತೂಕ ಮಾಡಿದ ಚಿನ್ನವನ್ನು ಪೋಲೀಸರು ಅಂಗಳದಲ್ಲಿ ಕೈಯಲ್ಲಿ ಬರೆದುಕೊಂಡಿರುತ್ತಾರೆ. ಕೈಯಲ್ಲಿ ಬರೆದುಕೊಂಡ ನಂತರ ನನ್ನ ಹಾಗೂ ಇಬ್ಬರು ವ್ಯಕ್ತಿಯ ಸಹಿಯನ್ನು ಪಡೆದುಕೊಂಡಿರುತ್ತಾರೆ. ಅಂಗಳದಲ್ಲಿ ಸಹಿ ಹಾಕುವಾಗ ಸಮಯ ಎಷ್ಟಾಗಿತ್ತು ಎಂದರೆ

ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಮುಂದುವರಿದು ಅಂದಾಜು 10 ರಿಂದ ಬೆಳಗ್ಗೆ 11 ಗಂಟೆ ಆಯಿತು. ಅಲ್ಲಿಂದ ನೇರವಾಗಿ ಸುಶೀಲ ಜ್ಯುವೇಲರ್ಸ್‌ಗೆ ಹೋಗಿರುತ್ತೇವೆ. ಸುಶೀಲ ಜ್ಯುವೇಲರ್ಸ್ ತಲುಪುವಾಗ ಸುಮಾರು 12 ಗಂಟೆ ಆಗಿರಬಹುದು. ಅಲ್ಲಿಯೂ ಕೂಡ ಪೋಲೀಸರು ಜ್ಯುವೇಲರ್ಸ್ ಒಳಗೆ ಹೋಗಿ ಬಂಗಾರವನ್ನು ತೆಗೆದುಕೊಂಡು ಬಂದರು. ಆ ಎಲ್ಲಾ ಬಂಗಾರವನ್ನು ಅಂಗಡಿಯಲ್ಲಿಯೇ ನಾನೇ ತೂಕ ಮಾಡಿ ಪೋಲಿಸರಿಗೆ ಹೇಳಿರುತ್ತೇನೆ. ಪೋಲೀಸರು ಅದನ್ನು ಕೈಯಲ್ಲಿ ಬರೆದು ನನ್ನ ಮತ್ತು ಆರೋಪಿಯ ಅಂಗಳದಲ್ಲಿ ಸಹಿ ಹಾಕಿದ ಇನ್ನಿಬ್ಬರು ವ್ಯಕ್ತಿಯ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸಹಿಯನ್ನು ಪಡೆದುಕೊಳ್ಳುವಾಗ ಒಂದುವರೆಯಿಂದ 2 ಗಂಟೆಗಳ ಕಾಲ ಇದ್ದೆವು. ಆರೋಪಿಯ ಮನೆಯ ಅಂಗಳದಲ್ಲಿ ತೂಕ ಮಾಡಿದ ಬಂಗಾರ ಮತ್ತು ಸುಶೀಲ ಜ್ಯುವೇಲರ್ಸ್ ನಲ್ಲಿ ತೂಕ ಮಾಡಿದ ಬಂಗಾರ ಎರಡನ್ನೂ ಹಿಡಿದುಕೊಂಡು ಬಂದು ಠಾಣೆಯಲ್ಲಿ ತೂಕ ಮಾಡಿ ಅಲ್ಲಿ ಪೋಲಿಸರು ಟೈಪ್ ಮಾಡಿ ನಿಪಿ-4 ಕ್ಕೆ ಸಹಿಯನ್ನು ಪಡೆದುಕೊಂಡಿರುತ್ತಾರೆ. ಆರೋಪಿಯ ಮನೆಯ ಅಂಗಳದಲ್ಲಿ ಮತ್ತು ಸುಶೀಲ ಜ್ಯುವೇಲರ್ಸ್ ನಲ್ಲಿ ತೂಕ ಮಾಡಿದ ಆಭರಣಗಳು ಮತ್ತು ಅವುಗಳ ತೂಕ ಎಷ್ಟು ಎಂದು ಈಗ ಹೇಳಲು ಸಾಧ್ಯವಾಗುವುದಿಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ ಸ್ಥಳಗಳಿಗೆ ಆಭರಣಗಳನ್ನು ತೂಕ ಮಾಡಲು ಹೋಗಲೇ ಇಲ್ಲ ಎಂದರೆ ಸರಿಯಲ್ಲ. ಸದರಿ ಸ್ಥಳಗಳಲ್ಲಿ ಯಾವುದೇ ಒಡವೆಗಳು

ಸಿಗಲಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

Sd/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.

ಮೂಡಬಿದಿರೆ